ಆ) ಹಾಗಿದ್ದಲ್ಲಿ, ಅಂತಹ ರೈತರಿಗೆ ಸರ್ಕಾರದ ಪ್ರೋತ್ಸಾಹವೇನು:

ಇ) ಹಾಗಿದ್ದಲ್ಲಿ, ಪ್ರಾಮಾಣಿಕವಾಗಿ ಬಿಲ್ಲು ಪಾವತಿಸಿದ ರೈತರಿಗೆ ಮುಂದಿನ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಳ್ಳುವ ಆಲೋಚನೆ ಸರ್ಕಾರಕ್ಕೆ ಇದೆಯೇ?

ಶ್ರೀ ಹೆಚ್. ಡಿ. ರೇವಣ್ಣ (ಲೋಕೋಪಯೋಗಿ ಮತ್ತು ಇಂಧನ ಸಚಿವರು) :

ಅ) ಕೇವಲ ಅಲ ಸ್ವಲ್ಪ ನೀರಾವರಿ ಪಂಪುಸೆಟ್ಟು ಬಳಕೆದಾರರು ಮಾತ್ರ ಮಾರ್ಚ್ 2003 ರವರೆಗೆ ವಿದ್ಯುತ್ ಬಿಲ್ಲನ್ನು ಪಾವತಿ ಮಾಡಿರುತ್ತಾರೆ. ಬಹುತೇಕ ನೀರಾವರಿ ಪಂಪುಸೆಟ್ಟು ಬಳಕೆದಾರರು ಮಾರ್ಚ್ 2003ರ ಅಂತ್ಯದವರೆಗಿದ್ದ ವಿದ್ಯುತ್ ಬಾಕಿಯನ್ನು ಸರ್ಕಾರ ಸಂಪೂರ್ಣವಾಗಿ ಮನ್ನಾ ಮಾಡುತ್ತದೆಯೆಂದು ನಿರೀಕ್ಷಿಸಿ, ಪಾವತಿ ಮಾಡಿರಲಿಲ್ಲ.

ಅ) ಸರ್ಕಾರವು ದಿನಾಂಕ 21–2–2004 ರ ಆದೇಶದಲ್ಲಿ, ನೀರಾವರಿ ಪಂಪುಸೆಟ್ಟು ಬಳಕೆದಾರರ ದಿನಾಂಕ 31–3–2003ರ ಅಂತ್ಯದವರೆಗಿನ ವಿದ್ಯುತ್ ಬಾಕಿಯನ್ನು ಮನ್ನಾ ಮಾಡಿರುತ್ತದೆ. ಸರ್ಕಾರದ ಈ ಆದೇಶದ ಪ್ರಕಾರ

31–3–2003ರ ಅಂತ್ಯದವರೆಗಿನ ಬಾಕಿಯನ್ನು ಒಂದು ವೇಳೆ 1–4–2003 ಮತ್ತು ತದನಂತರದಲ್ಲಿ ಪಾವತಿ ಮಾಡಿದ್ದಲ್ಲಿ ಅಂತಹ ನೀರಾವರಿ ಪಂಪುಸೆಟ್ಟು ಗ್ರಾಹಕರಿಗೆ ಮಾತ್ರ ಪಾವತಿಸಲಾದ ಹಣವನ್ನು 2003–04 ರ ವಿದ್ಯುತ್ ಬಿಲ್ಲುಗಳಲ್ಲಿ ಹೊಂದಾಣಿಕೆ ಮಾಡಿಕೊಡಲಾಗುತ್ತದೆ.

ಇ) ಸರ್ಕಾರದ ಮುಂದೆ ಇಂತಹ ಪ್ರಸ್ತಾವನೆಗಳು ಇರುವುದಿಲ್ಲ.

851(1595) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಸವಣೂರ ತಾಲ್ಲೂಕಿನ ಚಿಕ್ಕಮರಳೀಹಳ್ಳಿ ಹತ್ತಿರ 270 ಎಕರೆ ಅರಣ್ಯ ಭೂಮಿಯಲ್ಲಿ ಕೆರೆ ಸಹ ಇರುವುದು ಸರ್ಕಾರದ ಗಮನಕ್ಕೆ ಇದೆಯೇ;

ಆ) ಬಂದಿದ್ದಲ್ಲಿ, ಅಭಿವೃದ್ಧಿ ಮಾಡದೇ ಇರಲು ಕಾರಣವೇನು;

ಇ) ಇಷ್ಟು ದೊಡ್ಡ ಪ್ರಮಾಣದ ಅರಣ್ಯ ಜಮೀನನ್ನು ಅಭಿವೃದ್ಧಿ ಪಡಿಸದ ಅಧಿಕಾರಿಗಳ ವಿರುದ್ಧ ಸರ್ಕಾರ ಏನು ಕ್ರಮ ಕೈಗೊಂಡಿದ.

ಈ) ಹಾಗಿದ್ದಲ್ಲಿ, ಅಭಿವೃದ್ಧಿ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಗುರುಪಾದಪ್ಪ ನಾಗಮಾರಪಲ್ಲಿ (ಮಾನ್ಯ ಅರಣ್ಯ ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು):

ಅ) ಹೌದು

ಆ) ಸದರಿ ಅರಣ್ಯ ಪ್ರದೇಶದಲ್ಲಿ ಜೆ.ಬಿ.ಐ.ಸಿ. ಯೋಜನೆ (ಮಾದರಿ–03) ರಡಿ 1998–99 ನೇ ಸಾಲಿನಲ್ಲಿ (102 ಹೆ.) ಮತ್ತು 1999–00 ನೇ ಸಾಲಿನಲ್ಲಿ (140 ಹೆ.) ನೆಡುತೋಪು ಬೆಳೆಸಿ ಅಭಿವೃದ್ಧಿಪಡಿಸಲಾಗಿರುತ್ತದೆ.

ಇದರಿಂದಾಗಿ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳುವ ಪ್ರಶ್ನೆ ಉದ್ಭವಿಸುವುದಿಲ್ಲ.

852(1596) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1964 ನೇ ಸಾಲಿನಲ್ಲಿ ಮೋಜಣಿ ಕಾರ್ಯವನ್ನು ಮಾಡಿದ ನಂತರ ಸರ್ಕಾರ ಈ ಕಾರ್ಯವನ್ನು ಮುಂದುವರಿಸದೇ ರಸ್ತೆಗಳ ಹಾಗೂ ಜಮೀನುಗಳ ಹದ್ದು ಬಸ್ತ್‌ಗಳ ತಂಟೆ ತಕರಾರುಗಳ, ವ್ಯಾಜ್ಯಗಳು ಹೆಚ್ಚಾಗಿದ್ದು ಸಾರ್ವಜನಿಕರಿಗೆ ಹಾಗೂ ರೈತರಿಗೆ ಬಿತ್ತುವ:ಸುಗ್ಗಿಯ ಹಂಗಾಮಿನಲ್ಲಿ ಸರ್ಕಾರದ ಯೋಜನೆಗಳಾದ ಸುಜಲಾ ಹಾಗೂ ಜಲಾನಯನ ಯೋಜನೆಗಳಿಗೆ ತೊಂದರೆಯಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಹಾಗಿದ್ದಲ್ಲಿ, ಜಮೀನುಗಳ ಮೋಜಣಿ ಕಾರ್ಯ ನಡೆಸಿ ಹದ್ದುಬಸ್ತುಗಳನ್ನು ಗುರುತು ಮಾಡಿಸಲು ಸರ್ಕಾರ ಕ್ರಮ ಕೈಗೊಳ್ಳುವುದೇ:

ಇ) ಹಾಗಿದ್ದಲ್ಲಿ, ಎಷ್ಟು ಕಾಲಾವಕಾಶದಲ್ಲಿ ಸರ್ಕಾರ ಕ್ರಮ ಕೈಗೊಳ್ಳುತ್ತದೆ?

ಶ್ರೀ ಎಂ. ಪಿ. ಪ್ರಕಾಶ್, (ಕಂದಾಯ ಸಚಿವರು) :

ಅ) ಇಲ್ಲ.

ಆ) ಮತು ಇ) ಜಮೀನುಗಳ ಮೋಜಣಿ ಕಾಯ್ ನಡೆಸಲು ರಾಜ್ಯದಲ್ಲಿ ಸಮಗ್ರ ಮರುಭೂಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಿ, ಮೊದಲು ಈ ಕಾರ್ಯವನ್ನು ಪ್ರಾಯೋಗಿಕವಾಗಿ ಮಂಡ್ಯ ಜಿಲ್ಲೆಯ ಮದ್ದೂರು ತಾಲ್ಲೂಕಿನ ಅತಗೂರು ಹೋಬಳಿಯಲ್ಲಿ ಪ್ರಾರಂಭಿಸಲಾಗಿದೆ. ಅಲ್ಲದೆ ತಾಲ್ಲೂಕಿನಲ್ಲಿ ರೂ. 900.00 ಲಕ್ಷ ವೆಚ್ಚದಲ್ಲಿ ರಾಜ್ಯದ ಒಂದು ತಾಲ್ಲಕೂಕಿನ್ಲಿ ಮರು ಭೂಮಾಪನ ಕಾರ್ಯ ಕೈಗೊಳ್ಳಲು ಉದ್ದೇಶಿಸಿ ದಿ:25–4–2000 ರಂದು ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಲಾಗಿದೆ.

ನಂತರ ಸರ್ಕಾರದ ಮಟ್ಟದಲ್ಲಿ ಈ ಬಗ್ಗೆ ಹಲವಾರು ಚರ್ಚೆಗಳು:ಚಿಂತನೆಗಳು ನಡೆದು ಆಧುನಿಕ ಉಪಕರಣಗಳನ್ನು ಉಪಯೋಗಿಸಿ ರಾಜ್ಯದಲ್ಲಿನ ಸರ್ಕಾರಿ ಜಮೀನುಗಳನ್ನು ಮಾತ್ರ ಮರುಭೂಮಾಪನ ಮಾಡುವ ಬಗ್ಗೆ ರೂ.190 ಕೋಟಿಗಳ ಯೋಜನಾ ವರದಿಯೊಂದನ್ನು ತಯಾರಿಸಿ ದಿ:21–5–2004 ರಂದು ಕೇಂದ್ರ ಸರ್ಕಾರಕ್ಕೆ ಕಳುಹಿಸಿ ಮಂಜೂರಾತಿ ನೀಡುವಂತೆ ಹಾಗೂ ಕೇಂದ್ರ ಪುರಸ್ಕೃತ ಯೋಜನೆಯಡಿ ಈ ಕಾರ್ಯ ಕೈಗೊಳ್ಳಲು ಶೇ.50 ರಷ್ಟು ಅನುದಾನವನ್ನು ಅಂದರೆ ರೂ. 95.00 ಕೋಟಿ ಬಿಡುಗಡೆ ಮಾಡುವಂತೆ ಕೋರಲಾಗಿದೆ.

ಈಗ ಅತಗೂರು ಹೋಬಳಿಯಲ್ಲಿ ಕೈಗೊಳ್ಳಲಾದ ಮರು ಭೂಮಾಪನದ ಫಲಿತಾಂಶದ ಆಧಾರದ ಮೇಲೆ ಹಾಗೂ ಆರ್ಥಿಕ ಲಭ್ಯತೆಯನ್ನು ಗಮನದಲ್ಲಿಟ್ಟುಕೊಂಡು ಕೇಂದ್ರ ಸರ್ಕಾರದೊಡನೆ ವ್ಯವಹರಿಸಿ, ಈ ಹಿಂದೆ ಕೇಂದ್ರ ಸರ್ಕಾರಕ್ಕೆ ಸಲ್ಲಿಸಿದ ಪ್ರಸ್ತಾವನೆಯನ್ನು ಅನುಸರಿಸಿ, ಈಗ ಈ ಯೋಜನೆಗೆ ತಗಲಬಹುದಾದ ಅಂದಾಜು ವೆಚ್ಚವನ್ನೊಳಗೊಂಡ ಪರಿಷ್ಕೃತ ಪ್ರಸ್ತಾವನೆಯನ್ನು ಕೇಂದ್ರ ಸರ್ಕಾರಕ್ಕೆ ಸಲ್ಲಿಸಿ ಈ ಮರು ಭೂಮಾಪನ ಕಾರ್ಯವನ್ನು ರಾಜ್ಯಾದ್ಯಂತ ಕೈಗೊಳ್ಳುವ ಬಗ್ಗೆ ಪರಿಶೀಲಿಸಲಾಗುತ್ತದೆ.

853(1597) ಶ್ರೀ ಸಿಂಧೂರ ರಾಜಶೇಖರ (ಶಿಗ್ಗಾಂವ್): ಮಾನ್ಯ ಲೋಕೋಪಯೋಗಿ ಮತ್ತು ಇಂಧನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಶಿಗ್ಗಾಂವ ಮತ ಕ್ಷೇತ್ರದ ಹಿಂದುಳಿದ ಜನಾಂಗ ಪ್ರದೇಶಗಳಾದ ಜೊಂಡಲಗಟ್ಟಿ ಹಾಗೂ ಹಾಳೂರ ತರ್ಲಘಟ್ಟ ಗ್ರಾಮಗಳು ಇಲ್ಲಿಯವರೆಗೆ ವಿದ್ಯುತ್ ಸಂಪರ್ಕದಿಂದ ವಂಚಿತವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ:

ಆ) ಸರ್ಕಾರವು ಇಲ್ಲಿಯವರೆಗೆ ಈ ಎರಡು ಗ್ರಾಮಗಳಿಗೆ ವಿದ್ಯುತ್ ಸಂಪರ್ಕ ಕಲ್ಪಿಸದಿರಲು ಕಾರಣವೇನು: